# ಮೆಳ್ಳೆಗಣ್ಣಿಗೆ ಸರ್ಜರಿ

ಕಣ್ಣಿಗೆ ಪಾರ್ಶ್ವವಾಯು ಉಂಟಾಗಿ ಮಾಂಸಖಂಡಗಳು ದುರ್ಬಲವಾದ ಕಾರಣ ಮಕ್ಕಳು 'ಮೆಳ್ಳೆಗಣ್ಣು' ಎಂಬ ಸಮಸ್ಯೆ ಎದುರಿಸುತ್ತಾರೆ. ಕ್ಲುಪ್ತ ಸಮಯದಲ್ಲಿ ತಪಾಸಣೆ ಹಾಗೂ ನುರಿತ ವೈದ್ಯರಿಂದ ಶಸ್ತ್ರಚಿಕಿತ್ಸೆಗೊಳಗಾದರೆ ಈ ಅಪರೂಪದ ಸಮಸ್ಯೆಯನ್ನು ಸಂಪೂರ್ಣವಾಗಿ ಗುಣಪಡಿಸಬಹುದು.

■ ಉಮಾ ಅನಂತ್



ಬೆಂಗಳೂರಿನ ಎಂಟು ವರ್ಷದ ಬಾಲಕಿ ಹಫ್ತಾ ಫಾತಿಮಾಗೆ ಕಣ್ಣಿನ ಪಾರ್ಶ್ವವಾಯುವಿನ ಸಮಸ್ಯೆ. ಕಾಂಜೆನಿಟಲ್ ಸುಪೀರಿಯರ್ ಒಬ್ಲಿಕ್ ಪಾಲ್ಸಿ ಎಂದು ಕರೆಯಲಾಗುವ ಅಪರೂಪದ ಕಾಯಿಲೆಯಿಂದ ಬಳಲುತ್ತಿದ್ದ ಫಾತಿಮಾ ಶಾಲೆಗೆ ಹೋದ ಮೊದಲ ದಿನವೇ ಸ್ನೇಹಿತೆಯರಿಂದ ವಕ್ರದೃಷ್ಟಿ ಅನುಭವಿಸಿ ಮಾನಸಿಕವಾಗಿ ಕುಗ್ಗುವಂತಾದಳು. ಕಣ್ಣಿನ ಪಾರ್ಶ್ವವಾಯುವಿನ ಕಾರಣ ಮೆಳ್ಳೆಗಣ್ಣು ಉಂಟಾಗಿ ನೇರವಾಗಿ ನೋಡಲಾಗುತ್ತಿರಲಿಲ್ಲ. ಕುತ್ತಿಗೆಯನ್ನು ಬಾಗಿಸಿ ತಲೆಯನ್ನು ಅಡ್ಡಡ್ಡವಾಗಿ ಇಟ್ಟುಕೊಂಡು ನೋಡಬೇಕಾಗಿತ್ತು. ದೃಷ್ಟಿಯಲ್ಲಿ ಊನ ಇದ್ದುದರಿಂದ ನೋಡುವ ಪ್ರತಿಯೊಂದು ವಸ್ತುವೂ ಎರಡೆರಡು ಆಗಿ ಕಾಣುತ್ತಿತ್ತು. ಅಂದಾಜು ಒಂದು ಲಕ್ಷದಲ್ಲಿ ಮೂವರಿಗೆ ಮಾತ್ರವೇ ಬರುವ ಈ ಅಪರೂಪದ ಕಾಯಿಲೆಗೆ ಫಾತಿಮಾ ತುತ್ತಾಗಿದ್ದು ಹೆತ್ತವರಿಗೂ ನುಂಗಲಾರದ ಬಿಸಿತುಪ್ಪವಾಗಿ ಪರಿಣಮಿಸಿತ್ತು.

ಕಣ್ಣಿನಲ್ಲಿರುವ ಸುಪೀರಿಯರ್ ಒಬ್ಲಿಕ್ ಎಂಬ ಮಾಂಸಖಂಡವು ದುರ್ಬಲವಾದ್ದರಿಂದ ಕಣ್ಣಿನ ಚಲನವಲನಗಳಿಗೆ ಇದು ಅಡ್ಡಿ ಉಂಟು ಮಾಡುತ್ತಿತ್ತು. ಫಾತಿಮಾ ಎರಡೆರಡು ದೃಷ್ಟಿಯನ್ನು ತಪ್ಪಿಸಲು ತಲೆಯನ್ನು ಓರೆಯಾಗಿಸಿ ನೋಡಲಾರಂಭಿಸಿದ್ದಳು. ಇದರಿಂದ ಅಸಹಜವಾದ ತಲೆ ಭಂಗಿ ಉಂಟಾಗಿತ್ತು. ಜನ್ಮದತ್ತವಾಗಿ ಬಂದಿರುವುದರಿಂದ ಹೆತ್ತವರಿಗೂ ಈ ಬಗ್ಗೆ, ಚಿಕಿತ್ಸೆ ಬಗ್ಗೆ ಮಾಹಿತಿ ಇರಲಿಲ್ಲ. ಶಾಲೆಯಲ್ಲಿ ಮಗು ಮಾನಸಿಕವಾಗಿ ಕುಗ್ಗಲಾರಂಭಿಸಿದಾಗ ಹೆತ್ತವರು ಕಣ್ಣಿನ ವೈದ್ಯರ ಬಳಿ ತಂದು ತಪಾಸಣೆ ಮಾಡಿಸಿದರು. ಬೆಂಗಳೂರಿನ ಡಾ. ಅಗರ್‌ವಾಲ್ಸ್ ಕಣ್ಣಿನ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗೊಳಗಾದ ಮಗು ಇದೀಗ ಸಂಪೂರ್ಣ ಗುಣಮುಖವಾಗಿದ್ದು, ಸ್ಪಷ್ಟವಾದ ದೃಷ್ಟಿ ಹೊಂದಿದ್ದಾಳೆ. ನಿರಾತಂಕವಾಗಿ ಶಾಲೆಗೂ ಹೋಗಿ ಬಂದು ಮಾಡುತ್ತಿದ್ದಾಳೆ.

'ಮಕ್ಕಳಿಗೆ ಮೆಳ್ಳೆಗಣ್ಣು ಇರುವ ಬಗ್ಗೆ ಪೋಷಕರಿಗೆ ಅರಿವು ಇರುವುದಿಲ್ಲ. ಇದನ್ನು ಸರಿಪಡಿಸಲಾಗದು ಎಂಬ ತೀರ್ಮಾನಕ್ಕೆ ತಾವೇ ಬಂದು ವೈದ್ಯರಿಗೆ ತೋರಿಸುವ ಬದಲು ಸುಮ್ಮನಾಗುವ ಪಾಲಕರೇ ಹೆಚ್ಚು. ಆದರೆ ಇದಕ್ಕೆ ಸರಿಯಾದ ಚಿಕಿತ್ಸೆ ಸಕಾಲದಲ್ಲಿ ಪಡೆದರೆ ಶೇ.90ರಷ್ಟು ರೋಗಿಗಳು ಗುಣಮುಖರಾಗಲು ಸಾಧ್ಯ. ಇನ್ನು ಕೆಲವರಿಗೆ ಇದಕ್ಕೆ ಸಂಬಂಧಿಸಿದ ಕನ್ನಡಕ ಹಾಕಿದರೆ ತನ್ನಿಂದತಾನೇ ಸರಿಯಾಗುತ್ತದೆ. ಹೆಚ್ಚಿನ ಸಮಸ್ಯೆ ಇದೆ ಎಂದವರಿಗೆ ಶಸ್ತ್ರಚಿಕಿತ್ಸೆಯೂ ಫಲಕಾರಿಯಾಗುತ್ತದೆ. ಆದರೆ ವೈದ್ಯರ ತಪಾಸಣೆ ಮಾತ್ರ ಅಗತ್ಯ' ಎಂದು ಹೇಳುತ್ತಾರೆ ಡಾ.ಅಗರ್‌ವಾಲ್ಸ್ ಆಸ್ಪತ್ರೆಯಲ್ಲಿ ಮಕ್ಕಳ ನೇತ್ರ ತಜ್ಞರಾಗಿರುವ ಡಾ. ಮುರಳೀಧರಕೃಷ್ಣ.



ಬಾಲಕಿ ಹಫ್ತಾಳೊಂದಿಗೆ
ಡಾ. ಮುರಳೀಧರಕೃಷ್ಣ, ಡಾ. ರಘು ನಾಗರಾಜ್

## ಒಂದೇ ಕಣ್ಣಿಗೆ ಮೆಳ್ಳೆಗಣ್ಣು

'ಸಂಕೀರ್ಣ ಸಮಸ್ಯೆ ಎದುರಿಸುತ್ತಿದ್ದ ಫಾತಿಮಾಳಿಗೆ ಒಟ್ಟು ಒಂದೂಕಾಲು ಗಂಟೆ ಕಾಲ ಶಸ್ತ್ರಚಿಕಿತ್ಸೆ ನಡೆಸಲಾಯಿತು. ತಜ್ಞ ಶಸ್ತ್ರಚಿಕಿತ್ಸಕರು ಮೂರು ವಿವಿಧ ಮಾಂಸಖಂಡಗಳ ಮೇಲೆ ಶಸ್ತ್ರಚಿಕಿತ್ಸೆ ನಡೆಸಿದರು. ಈಗ ರೋಗಿಯು ಮೆಳ್ಳೆಗಣ್ಣು ಸರಿಯಾಗಿದೆ. ಆಕೆಯ ಕಣ್ಣುಗಳು ನೇರವಾಗಿದ್ದು ಮತ್ತು ಸೂಕ್ತ ರೀತಿಯಲ್ಲಿವೆ. ಇದೀಗ ಪ್ರತಿ ಆರು ತಿಂಗಳಿಗೊಮ್ಮೆ ನಿಯಮಿತವಾದ ತಪಾಸಣೆ ಮಾಡಿಸಿಕೊಳ್ಳಬೇಕಾದುದಷ್ಟೇ ಆಕೆಯ ಪಾಲಿಗೆ ಉಳಿದಿದೆ. ಮಕ್ಕಳಿಗೆ ಹುಟ್ಟಿದಾಗಿನಿಂದ ಈ ಸಮಸ್ಯೆ ಬಂದರೆ ದೊಡ್ಡವರಿಗೆ ಅಪಘಾತವಾದಾಗ ತಲೆಗೆ ಪೆಟ್ಟಾದರೆ ಮಾತ್ರ ಮೆಳ್ಳೆಗಣ್ಣು ಬರುವ ಸಾಧ್ಯತೆ ಇದೆ' ಎಂದು ವಿವರಿಸುತ್ತಾರೆ ಈ ವೈದ್ಯರು.

'ಸಾಮಾನ್ಯವಾಗಿ ಮೆಳ್ಳೆಗಣ್ಣು ಒಂದೇ ಕಣ್ಣಿನಲ್ಲಿ ಕಾಣಿಸಿಕೊಳ್ಳುವುದು ಇದೆ. ಒಂದು ಕಣ್ಣು ಸರಿಯಾಗಿ ಕೆಲಸ ಮಾಡುತ್ತಿರುವಾಗ ಮತ್ತೊಂದು ಕಣ್ಣು ಸೋಮಾರಿಯಾಗುತ್ತದೆ. ಇದನ್ನು 'ಲೇಜಿ ಐ' ಎನ್ನಲಾಗುತ್ತದೆ. ಕ್ಲಪ್ತ ಸಮಯದಲ್ಲಿ ಕಣ್ಣಿನ ಶಸ್ತ್ರಚಿಕಿತ್ಸೆ ಮಾಡಿಸದಿದ್ದರೆ ಶಾಶ್ವತವಾಗಿ ದೃಷ್ಟಿ ಕಳೆದುಕೊಳ್ಳುವ ಅಪಾಯ ಇದೆ. ಆದರೆ